11.	ಬಾಗಲಕೋಟೆ	25.57	11.21
12.	ಹಾವೇರಿ	19.61	6.84
13.	ಬಿಜಾಪುರ	23.29	9.38
14.	ಧಾರವಾಡ	13.29	5.62
15.	ಗದಗ	13.82	6.76
16.	ಬೆಳಗಾವಿ	23.63	ಬಿಡುಗಡೆಯಾಗ ಬೇಕಾಗಿರುತ್ತದೆ.
17.	ಉತ್ತರ ಕನ್ನಡ	41.56	ಬಿಡುಗಡೆಯಾಗ ಬೇಕಾಗಿರುತ್ತದೆ
18.	ಮಂಡ್ಯ	8.19	3.92
19.	ಹಾಸನ	32.54	14.98
20.	ಮೈಸೂರು	37.42	13.42
21.	ಕೊಡಗು	33.61	ಬಿಡುಗಡೆಯಾಗ ಬೇಕಾಗಿರುತ್ತದೆ
22.	ಚಾಮರಾಜನಗರ	9.73	ಬಿಡುಗಡೆಯಾಗ ಬೇಕಾಗಿರುತ್ತದೆ
23.	ದಕ್ಷಿಣ ಕನ್ನಡ	24.60	ಬಿಡುಗಡೆಯಾಗ ಬೇಕಾಗಿರುತ್ತದೆ
24.	ಶಿವಮೊಗ್ಗ	21.93	ಬಿಡುಗಡೆಯಾಗ ಬೇಕಾಗಿರುತ್ತದೆ
25.	ಚಿಕ್ಕಮಗಳೂರು	29.23	ಬಿಡುಗಡೆಯಾಗ ಬೇಕಾಗಿರುತ್ತದೆ
26.	ಉಡುಪಿ	14.45	ಬಿಡುಗಡೆಯಾಗ ಬೇಕಾಗಿರುತ್ತದೆ
	ಒಟ್ಟು ಅನುದಾನ	**613.37**	**134.32**

1439 (1890) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ದೇವಣ್ಣ ಪದ್ಮನಾಭ ಕಾಮತ್ ವಿಶ್ವವಿಖ್ಯಾತ ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ನೋಂದಾಯಿತ ಮಂಡಳಿಗೆ ಕಳೆದ 2 ವರ್ಷಗಳ ಹಿಂದೆ ಇನ್‌ಫೋಸಿಸ್ ಫೌಂಡೇಷನ್‌ರವರು ಧರ್ಮಾರ್ಥ ನೀಡಿದ್ದು ಎಲ್.ಜಿ.407 ವಾಹನವನ್ನು ಪ್ರಾದೇಶಿಕ ಸಾರಿಗೆ ಇಲಾಖೆಯವರು ನೋಂದಣಿ ಮಾಡದೇ ಇರುವುದರಿಂದ ವಾಹನ ಹಾಳಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮವೇನು;

ಆ) ದಾನಿಗಳಿಂದ ನೀಡಿದಂತಹ ವಾಹನಗಳಿಗೆ ನೋಂದಣಿ ಮಾಡಲು ಸರ್ಕಾರ ಹೊಸ ನೀತಿ ತರಲು ಉದ್ದೇಶಿಸಿದೆಯೇ;

ಇ) ಹಾಗಿದ್ದಲ್ಲಿ, ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು):

ಅ) ಸದರಿ ಸಂಸ್ಥೆಯವರು ಪಡೆದ ವಾಹನವನ್ನು ಖಾಸಗಿ ಸೇವಾ ವಾಹನವನ್ನಾಗಿ ನೋಂದಾಯಿಸಲು ಅವಕಾಶ ಇರುತ್ತದೆ. ಅವಶ್ಯಕವಿರುವ ತೆರಿಗೆಯನ್ನು ಪಾವತಿಸಿ ನೋಂದಣಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಸರ್ಕಾರದಿಂದ ತೆರಿಗೆ ವಿನಾಯಿತಿ ಪಡೆದು ಸಲ್ಲಿಸಿದಲ್ಲಿ ನಿಗದಿತ ನೋಂದಣಿ ಶುಲ್ಕವನ್ನು ಮಾತ್ರ ಪಾವತಿಸಬಹುದಾಗಿದೆಯೆಂದು ಈಗಾಗಲೇ ಸದರಿ ಸಂಸ್ಥೆಯವರಿಗೆ ಅನೇಕ ಬಾರಿ ತಿಳಿಸಲಾಗಿರುತ್ತದೆ. ತೆರಿಗೆ ವಿನಾಯತಿ ನೀಡುವ ಸಂಬಂಧ ಸರ್ಕಾರವು ನಿಗದಿ ಪಡಿಸಿರುವ ಚೆಕ್‌ಲಿಸ್ಟ್ ಪ್ರಕಾರ ದಾಖಲೆಗಳನ್ನು ಒದಗಿಸುವಂತೆ ತಿಳಿಸಲಾಗಿರುತ್ತದೆ. ಆದರೆ, ಅರ್ಜಿದಾರರು ಚೆಕ್‌ಲಿಸ್ಟ್ ಪ್ರಕಾರ ಅಗತ್ಯವಿರುವ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಆ) ಇಲ್ಲ

ಇ) ಅನ್ವಯಿಸುವುದಿಲ್ಲ.